
# ಖಾತೆಗಳಿಗೆ ನಾಮಿನಿ ಇರದಿದ್ದರೆ...





■ ಗಿರೀಶ್ ಸಿ.ಜಿ.

ಹಣಕಾಸಿನ ವಿಚಾರದಲ್ಲಿ 'ನಾಮಿನಿ' (Nominee) ಅಥವಾ ನಾಮನಿರ್ದೇಶನ ಎನ್ನುವುದು ಅತ್ಯಂತ ಪ್ರಮುಖ ವಿಷಯ. ಖಾತೆದಾರರು ಮರಣ ಹೊಂದಿದರೆ, ಅವರು ಕಷ್ಟಪಟ್ಟು ದುಡಿದ ಹಣ ಅವರ ಕುಟುಂಬಕ್ಕೆ ಅಥವಾ ಅವಲಂಬಿತರಿಗೆ ಸುಲಭವಾಗಿ ತಲುಪಲು ಈ 'ನಾಮಿನಿ' ವ್ಯವಸ್ಥೆ ಬಾಂಧವ್ಯ ಸೇತುವೆಯಂತೆ ಕೆಲಸ ಮಾಡುತ್ತದೆ. ನೆನಪಿಡಿ: 'ನಾಮಿನಿ' ಎಂದರೆ ಹಣದ ಮಾಲೀಕನಲ್ಲ, ಅವನು ಕೇವಲ ಧರ್ಮದರ್ಶಿ (Trustee).

ನಾಮಿನಿಯ ಕೆಲಸವೇನೆಂದರೆ ಹಣವನ್ನು ಕಾನೂನುಬದ್ಧ ವಾರಸುದಾರರಿಗೆ ತಲುಪಿಸುವುದು. ನಾಮಿನಿ ಇದ್ದರೆ ಬ್ಯಾಂಕ್ ತನ್ನ ಜವಾಬ್ದಾರಿಯಿಂದ ಮುಕ್ತವಾಗುತ್ತದೆ.

## ನಾಮಿನಿಯ ಮಹತ್ವ

- ಬ್ಯಾಂಕ್ ಖಾತೆ ಮತ್ತು ಠೇವಣಿಗಳು (Bank Accounts & FDs): ಬ್ಯಾಂಕ್ ಖಾತೆಗೆ ನಾಮಿನಿ ಇದ್ದರೆ, ಖಾತೆದಾರರ ಮರಣದ ನಂತರ ಬ್ಯಾಂಕ್ ಕೇವಲ ಮರಣ ಪ್ರಮಾಣಪತ್ರ (Death Certificate) ಮತ್ತು ನಾಮಿನಿಯ ಕೆವೈಸಿ (KYC) ಪರಿಶೀಲಿಸಿ ಹಣವನ್ನು ಹಸ್ತಾಂತರಿಸುತ್ತದೆ. ಇದು ಕೆಲವೇ ದಿನಗಳಲ್ಲಿ ಮುಗಿಯುವ ಸರಳ ಪ್ರಕ್ರಿಯೆ.
- ಅಂಚೆ ಕಚೇರಿ (Post Office Schemes): ಪಿಪಿಎಫ್ (PPF), ಸುಕನ್ಯಾ ಸಮೃದ್ಧಿ, ಅಥವಾ ಉಳಿತಾಯ ಖಾತೆಗಳಿಗೆ ನಾಮಿನಿ ಕಡ್ಡಾಯ ಎನ್ನಬಹುದು. ಅಂಚೆ ಇಲಾಖೆಯ ನಿಯಮಗಳು ಹಳೆಯದಾಗಿರುವುದರಿಂದ, ನಾಮಿನಿ ಇದ್ದರೆ ಮಾತ್ರ ಕ್ಲೈಮ್ ಪ್ರಕ್ರಿಯೆ ತ್ವರಿತವಾಗಿ ನಡೆಯುತ್ತದೆ.
- ಷೇರುಗಳು ಮತ್ತು ಮ್ಯೂಚುವಲ್ ಫಂಡ್ (Shares & Mutual Funds): ಇಲ್ಲಿ ನಾಮಿನಿ ಇರುವುದು ಬಹಳ ಮುಖ್ಯ. ಡಿಮ್ಯಾಟ್ (Demat) ಖಾತೆಯಲ್ಲಿರುವ ಷೇರುಗಳನ್ನು ನಾಮಿನಿಯ ಖಾತೆಗೆ ವರ್ಗಾಯಿಸುವುದು (Transmission of Shares) ಸುಲಭ. ಮ್ಯೂಚುವಲ್ ಫಂಡ್‌ಗಳಲ್ಲಿ ನಾಮಿನಿ ಹೆಸರನ್ನು ನೋಂದಾಯಿಸದಿದ್ದರೆ, ಹೂಡಿಕೆ ಮಾಡಿದ ಹಣವನ್ನು ಹಿಂಪಡೆಯಲು ಬಹಳಷ್ಟು ದಾಖಲೆಗಳನ್ನು ಒದಗಿಸಬೇಕಾಗುತ್ತದೆ.
- ಇಪಿಎಫ್ (EPF Employees Provident Fund): ಉದ್ಯೋಗಿಗಳಿಗೆ ಇದು ಅತ್ಯಂತ ದೊಡ್ಡ ಆರ್ಥಿಕ ಭದ್ರತೆ. ಇಪಿಎಫ್‌ನಲ್ಲಿ 'ಇ–ನಾಮಿನೇಷನ್' ಮಾಡಿದ್ದರೆ, ಆನ್‌ಲೈನ್ ಮೂಲಕವೇ ಕುಟುಂಬದವರು ಹಣವನ್ನು ಕ್ಲೈಮ್ ಮಾಡಬಹುದು. ಜೊತೆಗೆ, ಖಾತೆದಾರರು ಮರಣ ಹೊಂದಿದರೆ ಸಿಗುವ ಇಡಿಎಲ್‌ಐ ಹಣವೂ (ಗರಿಷ್ಠ 7 ಲಕ್ಷದವರೆಗೆ) ನಾಮಿನಿಗೆ ಸುಲಭವಾಗಿ ಸಿಗುತ್ತದೆ.

## ನಾಮಿನಿ ಮಾಡದಿದ್ದರೆ...

ಒಂದು ವೇಳೆ ಖಾತೆದಾರರು ನಾಮಿನಿಯನ್ನು ಹೆಸರಿಸದೆ ಇದ್ದು, ಮರಣ ಹೊಂದಿದ ಸಂದರ್ಭದಲ್ಲಿ ಕೆಲವು ಸವಾಲುಗಳನ್ನು ಎದುರಿಸಬೇಕಾಗುತ್ತದೆ.

- ಕಾನೂನು ಉತ್ತರಾಧಿಕಾರ ಪತ್ರ (Legal Heir Certificate): ಸಣ್ಣ ಮೊತ್ತದ ಹಣವಾಗಿದ್ದರೆ, ಬ್ಯಾಂಕುಗಳು ತಹಶೀಲ್ದಾರ್ ಅಥವಾ ಕಂದಾಯ ಇಲಾಖೆಯಿಂದ ನೀಡುವ ವಂಶವೃಕ್ಷ ಅಥವಾ ಕಾನೂನು ಉತ್ತರಾಧಿಕಾರ ಪತ್ರವನ್ನು ಕೇಳುತ್ತವೆ. ಇದನ್ನು ಪಡೆಯಲು ಸರ್ಕಾರಿ ಕಚೇರಿಗಳಿಗೆ ಅಲೆದಾಡಬೇಕಾಗುತ್ತದೆ.
- ಉತ್ತರಾಧಿಕಾರ ಪ್ರಮಾಣಪತ್ರ (Succession Certificate): ಇದು ಸಂಕೀರ್ಣವಾಗಿರುತ್ತದೆ. ಖಾತೆಯಲ್ಲಿರುವ ಹಣ ದೊಡ್ಡ ಮೊತ್ತವಾಗಿದ್ದರೆ (ಕೆಲವು ಲಕ್ಷಗಳಿಗಿಂತ ಹೆಚ್ಚು), ಬ್ಯಾಂಕುಗಳು ಅಥವಾ ಮ್ಯೂಚುವಲ್ ಫಂಡ್ ಸಂಸ್ಥೆಗಳು ಕೇವಲ ವಂಶವೃಕ್ಷವನ್ನು ಒಪ್ಪುವುದಿಲ್ಲ. ಅವರು ಕೋರ್ಟ್‌ನಿಂದ ಸಕ್ಸೆಷನ್ ಸರ್ಟಿಫಿಕೇಟ್ (Succession Certificate) ತರಲು ಸೂಚಿಸುತ್ತಾರೆ.

ಸಮಸ್ಯೆ: ಇದಕ್ಕಾಗಿ ಲಾಯರ್ ನೇಮಿಸಬೇಕು, ಕೋರ್ಟ್‌ನಲ್ಲಿ ಅರ್ಜಿ ಹಾಕಬೇಕು ಮತ್ತು ತೀರ್ಪು ಬರಲು 6 ತಿಂಗಳಿಂದ 2 ವರ್ಷಗಳ ಸಮಯವೇ ಬೇಕಾಗಬಹುದು.

ಖರ್ಚು: ಕೋರ್ಟ್ ಶುಲ್ಕ ಮತ್ತು ವಕೀಲರ ಶುಲ್ಕದ ಸಮಯದ ದೊಡ್ಡ ಮೊತ್ತವನ್ನು ಖರ್ಚು ಮಾಡಬೇಕಾಗುತ್ತದೆ.

- ಕುಟುಂಬದಲ್ಲಿ ಜಗಳಗಳು: ನಾಮಿನಿ ಇಲ್ಲದಿದ್ದಾಗ, ಕುಟುಂಬದ ಎಲ್ಲ ಸದಸ್ಯರೂ (Legal Heirs) ಆಸ್ತಿಯ ಹಕ್ಕುದಾರರಾಗುತ್ತಾರೆ. ಎಲ್ಲರೂ ಸಹಿ ಹಾಕಿದರೆ ಮಾತ್ರ ಹಣ ಬಿಡುಗಡೆಯಾಗುತ್ತದೆ. ಒಂದು ವೇಳೆ ಕುಟುಂಬದಲ್ಲಿ ಮನಸ್ತಾಪವಿದ್ದರೆ, ಒಬ್ಬರು ಸಹಿ ಹಾಕಲು ನಿರಾಕರಿಸಿದರೂ ಪೂರ್ತಿ ಹಣ ಬ್ಯಾಂಕ್‌ನಲ್ಲೇ ಕೊಳೆಯುವಂತಾಗುತ್ತದೆ.
- ಖಾತೆ ಸ್ಥಗಿತ: ಸೂಕ್ತ ದಾಖಲೆ ನೀಡುವವರೆಗೂ ಬ್ಯಾಂಕ್ ಖಾತೆ ಅಥವಾ ಡಿಮ್ಯಾಟ್ ಖಾತೆಯನ್ನು ಸ್ಥಗಿತಗೊಳಿಸಲಾಗುತ್ತದೆ (Freeze). ಕುಟುಂಬಕ್ಕೆ ತುರ್ತಾಗಿ ಹಣದ ಅವಶ್ಯಕತೆ ಇದ್ದಾಗ ಆ ಹಣ ಸಿಗದೆ ಪರದಾಡುವಂತಾಗುತ್ತದೆ.
- 5. ಅನ್‌ಕ್ಲೈಮ್ಡ್ ಡೆಪಾಸಿಟ್: ಹಲವು ವರ್ಷಗಳ ಕಾಲ ಯಾರೂ ಕ್ಲೈಮ್ ಮಾಡದಿದ್ದರೆ, ಆ ಹಣವು ಶಿಕ್ಷಣ ಮತ್ತು ಜಾಗೃತಿ ನಿಧಿಗೆ ವರ್ಗಾವಣೆಯಾಗುತ್ತದೆ. ಅಲ್ಲಿಂದ ಹಣ ಪಡೆಯುವುದು ಮತ್ತಷ್ಟು ಕ್ಲಿಷ್ಟಕರ.

ನಾಮಿನಿ ಇಲ್ಲದಿದ್ದರೆ, ಹಣವಿದ್ದರೂ ಅನುಭವಿಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗುತ್ತದೆ. ಖಾತೆಗಳಿಗೆ ಯಾವುದೇ ನಾಮನಿರ್ದೇಶನ ಇಲ್ಲದ ಕಾರಣ, ಬ್ಯಾಂಕುಗಳು ಆ ಹಣವನ್ನು ಆರ್‌ಬಿಐನ ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಗೆ ವರ್ಗಾಯಿಸುತ್ತವೆ. 2025ರ ಆಗಸ್ಟ್ ವೇಳೆಗೆ, ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಠೇವಣಿದಾರರ ಶಿಕ್ಷಣ ಮತ್ತು ಜಾಗೃತಿ ನಿಧಿಗೆ ವರ್ಗಾಯಿಸಲಾದ ಒಟ್ಟು ಹಕ್ಕು ಸಾಧಿಸದ ಠೇವಣಿಗಳ ಮೊತ್ತವು ₹75,000 ಕೋಟಿಗಿಂತ ಹೆಚ್ಚಿದೆ. ■